## :: COMPROMISE DECREE ::

## IN THE COURT OF THE SENIOR CIVIL JUDGE AND J.M.F.C. H.D.KOTE

## O.S. NO: 274/2025

ವಾದಿ : ಕರ್ನಾಟಕ ಗ್ರಾಮೀಣ್ ಬ್ಯಾಂಕ್
ಪ್ರಧಾನ ಕಚೇರಿ:ನಂ.32,ಸಂಗನಕಲ್ ರಸ್ತೆ,
ಗಾಂಧಿನಗರ ಬಳ್ಳಾರಿ-583103,ಪ್ರಾದೇಶಿಕ
ಗ್ರಾಮೀಣ ಬ್ಯಾಂಕ್ ಕಾಯಿದೆ-1976 ರಂತೆ,
ಪ್ರತಿನಿಧಿಸುವವರು ವ್ಯವಸ್ಥಾಪಕರು, ಕರ್ನಾಟಕ
ಗ್ರಾಮೀಣ್ ಬ್ಯಾಂಕ್ ಕ್ಯಾತನಹಳ್ಳಿ ಶಾಖೆ,
ಹೆಚ್.ಡಿ.ಕೋಟೆ ತಾಲ್ಲೋಕು, ಮೈಸೂರು ಜಿಲ್ಲೆ..

(By Smt. **N.S.,** Advocate for plaintiff)

ವಿರುದ್ಧ

ಪ್ರತಿವಾದಿಗಳು :

1. ಬೀರೇಗೌಡ ಬಿನ್ ಬಸವೆಗೌಡ
ವಯಸ್ಸು ಸುಮಾರು 66 ವರ್ಷ,

2. ರಾಮಮ್ಮ ಕೋಂ ಬೀರೇಗೌಡ
ವಯಸ್ಸು ಸುಮಾರು 56 ವರ್ಷ

3. ರಮೇಶ ಬಿನ್ ಬೀರೇಗೌಡ
ವಯಸ್ಸು ಸುಮಾರು 37 ವರ್ಷ

4. ಮಹದೇವು ಬಿನ್ ಬಸವೇಗೌಡ
ವಯಸ್ಸು ಸುಮಾರು 61 ವರ್ಷ
ಶಿಂಡೇನಹಳ್ಳಿ ಗ್ರಾಮ, ಆಲನಹಳ್ಳಿ ಅಂಚೆ,
ಹಂಪಾಪುರ ಹೋಬಳಿ,
ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

( Parties in persons defendant no. 1 and 2 present. Defendant No. 3 and 4 absent.)

**<u>SUIT FILED ON: 18.12.2025</u>**

**Suit claim:** The plaintiff bank most humbly prays that this honorable court be pleased to pass a judgment and decree in favor of the plaintiff bank and against the defendants and direct the defendants to pay a sum of Rs. 8,04,304/- together with interest to till the date of realization together with court costs and such other reliefs as this honorable court be deems fit to grant under the circumstances of the above case in the interest of justice and equity.

The suit was taken on the 7th day of April, 2026 for final disposal before **Sri. Mahesh B.T., Senior Civil Judge & J.M.F.C, H.D.Kote,** in the presence of **Sri. N.S advocate for the plaintiff** and Parties in persons defendant no. 1 and 2 present. Defendant No. 3 and 4 absent**.** The following order was passed.

ದಿವಾನಿ ಪಕ್ರಿಯಾ ಸಂಹಿತೆ ಆದೇಶ **23** ನಿಯಮ **3** ರ ರೀತ್ಯಾ ಸಲ್ಲಿಸಲಾದ ಅರ್ಜಿ**.**

ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,

1. 1 ರಿಂದ 3 ನೇ ಪ್ರತಿವಾದಿಯರು ವಾದಿಯ ಬ್ಯಾಂಕ್‌ನಿಂದ ದಿನಾಂಕ: 05-05-2014 ರಂದು 2,00,000/- ರೂಗಳನ್ನು ಕೃಷಿ ಅಭಿವೃದ್ಧಿಗಾಗಿ (ಎ ಟಿ ಎಲ್) ಸಾಲವಾಗಿ ತಮ್ಮ ಹಳೆ ಖಾತೆ ಸಂಖ್ಯೆ. 85018874070 42034326001014 5 ಪಡೆದಿರುತ್ತಾರೆ. ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.12.50% ರಂತೆ ಬಡ್ಡಿಯನ್ನು

ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ, ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ, ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು,ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿರುತ್ತಾರೆ. ಹಾಗೂ ಮೇಲ್ಕಂಡ ಸಾಲದ ಭದ್ರತೆಗಾಗಿ ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ಬ್ಯಾಂಕಿಗೆ ಅಡಮಾನ ಮಾಡಿದ್ದು,ಸದರಿ ಅಡಮಾನಪತ್ರವನ್ನುದಿನಾಂಕ:16-04-201600 ಕಚೇರಿಯಲ್ಲಿ ಉಪ-ನೊಂದಣಾ ಹೆಚ್.ಡಿ.ಕೋಟೆ ನೊಂದಾಯಿಸಿಕೊಟ್ಟಿರುತ್ತಾರೆ. ವಾದಿಯು ಮೇಲ್ಕಂಡ ಸಾಲವನ್ನು ಪಾವತಿಸುವಂತೆ ಕೇಳಿಕೊಂಡಾಗ, ಪ್ರತಿವಾದಿಯರು ಮೇಲ್ಕಂಡ ಸಾಲವನ್ನು ಪಾವತಿಸುವುದಾಗಿ ಒಪ್ಪಿ, ದಿನಾಂಕ:24-02-2017, ದಿನಾಂಕ:01-03-2019 ರಂದು ಅಕ್ನಾಲೆಡ್ಜಮೆಂಟ್ ಆಫ್ ಲಯಬಲಿಟಿಯನ್ನೂ, ದಿನಾಂಕ:25-02-2022 ಮತ್ತು ದಿನಾಂಕ:20-01-2025 ರಂದು ಲೇಟರ್ ಆಫ್ ರಿವಿವಲ್ ಪತ್ರಗಳನ್ನು ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಮೇಲ್ಕಂಡ 2,00,000/- ರೂಪಾಯಿಗಳ ಸಾಲದ ಬಾಬು ಅಸಲು ಮತ್ತು ಬಡ್ಡಿ ಸೇರಿಸಿ, ದಿನಾಂಕ: 7,13,665/- ರೂಗಳನ್ನು ಬ್ಯಾಂಕಿಗೆ ಪ್ರತಿವಾದಿಯರು ದಿನಾಂಕ :01-07-2025 ಪಾವತಿಸಬೇಕಾಗಿರುತ್ತದೆ.

2. ಪ್ರತಿವಾದಿಯರು ವಾದಿಯ ಬ್ಯಾಂಕ್‌ನಿಂದ ದಿನಾಂಕ: 06-01-2012 ರಂದು ನಲವತ್ತು ಸಾವಿರ (40,000/-) ರೂಗಳನ್ನು ತಮ್ಮ ಹಳೆ ಖಾತೆ ಸಂಖ್ಯೆ. 85003647588 ಹಾಗೂ ಹೊಸ ಖಾತೆ ಸಂಖ್ಯೆ.42034310000112 ರ ಮೂಲಕ ವೈಯಕ್ತಿಕ ಸಾಲ ಪಡೆದಿರುತ್ತಾರೆ. ಸದರಿ ಸಾಲದ ಹಣಕ್ಕೆ ವಾರ್ಷಿಕ ಶೇ.14.25 ರಂತೆ ಬಡ್ಡಿಯನ್ನು ಹಾಗೂ ಬ್ಯಾಂಕಿನಿಂದ ಕಾಲಕಾಲಕ್ಕೆ ಬದಲಾಗುವ/ನಿಗಧಿಯಾಗುವ ಬ್ಯಾಂಕಿನ ಬಡ್ಡಿಯ ದರವನ್ನು ಸೇರಿಸಿ, ಮರುಪಾವತಿ ಮಾಡುವುದಾಗಿ ಬ್ಯಾಂಕಿನ ಕರಾರು ಮತ್ತು ನಿಬಂಧನೆಗಳಿಗೆ ಒಪ್ಪಿ, ಮೇಲ್ಕಂಡ ಹಣವನ್ನು ಸಾಲವಾಗಿ ಪಡೆದಿದ್ದು, ಬ್ಯಾಂಕಿಗೆ ದಾಖಲಾತಿಗಳನ್ನು ಬರೆದುಕೊಟ್ಟಿರುತ್ತಾರೆ. ಹಾಗೂ ಮೇಲ್ಕಂಡ ಸಾಲದ ಭದ್ರತೆಗಾಗಿ ಪ್ರತಿವಾದಿಯರು ಷೆಡ್ಯೂಲ್ ಆಸ್ತಿಯನ್ನು ಅಡಮಾನ ಮಾಡಿದ್ದು, ದಿನಾಂಕ:06-01-2012 ರಂದು ಬ್ಯಾಂಕಿಗೆ ವೈಯಕ್ತಿಕ ಸಾಲದ ಒಪ್ಪಂದ, ಗ್ಯಾರೆಂಟಿ ಆಗ್ರೀಮೆಂಟ್ ಮತ್ತು ಆನ್ ಡಿಮೆಂಡ್‌ನ್ನು ಬರೆದುಕೊಟ್ಟಿರುತ್ತಾರೆ. ವಾದಿಯು ಮೇಲ್ಕಂಡ

ಸಾಲವನ್ನು ಪಾವತಿಸುವಂತೆ ಕೇಳಿಕೊಂಡಾಗ, ಪ್ರತಿವಾದಿಯರು ಮೇಲ್ಕಂಡ ಸಾಲವನ್ನು ಪಾವತಿಸುವುದಾಗಿ ಒಪ್ಪಿ, ದಿನಾಂಕ:28-10-2014, ದಿನಾಂಕ:13-08-2017 ಮತ್ತು ದಿನಾಂಕಃ 31.03.2019 ರಂದು ಆಕ್ನಾಲೆಡ್ಜ್ಮೆಂಟ್ ಆಫ್ ಲಯಬಲಿಟಿಯನ್ನೂ ದಿನಾಂಕ:19-03-2022 ರಂದು ಮತ್ತು ದಿನಾಂಕ:20-01-2025 ರಂದು ಲೇಟರ್ ಆಫ್ ರಿವಿವಲ್ ಪತ್ರಗಳನ್ನೂ ಬ್ಯಾಂಕಿಗೆ ಬರೆದುಕೊಟ್ಟಿರುತ್ತಾರೆ. ಬ್ಯಾಂಕಿನವರು ಪ್ರತಿವಾದಿಗಳಿಗೆ ಸಾಲ ಪಾವತಿಸುವಂತೆ ನೋಟೀಸ್ ನೀಡಿರುತ್ತಾರೆ. ಆದರೂ ಪ್ರತಿವಾದಿಗಳು ಬ್ಯಾಂಕಿಗೆ ಸಾಲ ಪಾವತಿಸಿರುವುದಿಲ್ಲ. ಮೇಲ್ಕಂಡ 40,000/- ರೂಪಾಯಿಗಳ ಸಾಲದ ಬಾಬು ಅಸಲು ಮತ್ತು ಬಡ್ಡಿ ಸೇರಿಸಿ, ದಿನಾಂಕ:01-07-2025 ಕ್ಕೆ 89,671/- ರೂಗಳನ್ನು ಬ್ಯಾಂಕಿಗೆ ಪ್ರತಿವಾದಿಯರು ಪಾವತಿಸಬೇಕಾಗಿರುತ್ತದೆ. ಸದರಿ ಮೇಲ್ಕಂಡ ಎರಡು ಸಾಲಗಳಿಗೂ ಸಹ 4 ನೇ ಪ್ರತಿವಾದಿಯು ಜಾಮೀನುದಾರರಾಗಿತ್ತಾರೆ.

3. ಪ್ರತಿವಾದಿಯರು ಮೇಲ್ಕಂಡ ಸಾಲಗಳನ್ನು ಪಡೆದುಕೊಂಡ ನಂತರ, ವಾದಿಯ ಬ್ಯಾಂಕಿಗೆ ಬ್ಯಾಂಕಿನ ಷರತ್ತು ಮತ್ತು ನಿಭಂದನೆಗಳಂತೆ ಇದುವರೆವಿಗೂ ಯಾವುದೇ ಸಾಲದ ಹಣವನ್ನಾಗಲಿ,ಬಡ್ಡಿಯನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ. ಪ್ರತಿವಾದಿಗಳಿಗೆ ಬ್ಯಾಂಕ್ ಸಾಕಷ್ಟು ಕಾಲಾವಕಾಶಗಳನ್ನು ನೀಡಿದ್ದರೂ ಸಹ ಪ್ರತಿವಾದಿಗಳು ಬ್ಯಾಂಕಿಗೆ ಮೇಲ್ಕಂಡ ಸಾಲದ ಹಣವನ್ನು ಪಾವತಿಸಿರುವುದಿಲ್ಲ. ವಾದಿಯ ಬ್ಯಾಂಕಿನವರು ಹಲವಾರು ಭಾರಿ ಪ್ರತಿವಾದಿಯರನ್ನು ಖುದ್ದಾಗಿ, ಮತ್ತು ನೋಟೀಸ್ ನೀಡುವುದರ ಮೂಲಕ ಮತ್ತು ದಿನಾಂಕ:22-11-2025 ರಂದು ಸಹ ವಕೀಲರ ಮೂಲಕ ಪ್ರತಿವಾದಿಗಳಿಗೆ ನೋಟೀಸ್ ನೀಡಿದ್ದು, ಸಾಲದ ಹಣ ಮತ್ತು ಬಡ್ಡಿಯನ್ನು ಮರುಪಾವತಿಸುವಂತೆ ಕೇಳಿಕೊಂಡರೂ ಸಹ, ಪ್ರತಿವಾದಿಗಳು ಬ್ಯಾಂಕಿಗೆ ಮೋಸ ಮಾಡುವ ದುರುದ್ದೇಶದಿಂದ ಸಾಲದ ಹಣವನ್ನಾಗಲಿ, ಬಡ್ಡಿಯನ್ನಾಗಲಿ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ವಾದಿಯು ಸಾಲದ ವಸೂಲಾತಿಗಾಗಿ ಈ ದಾವೆಯನ್ನು ಘನನ್ಯಾಯಾಲಯದ ಮುಂದೆ ತಂದಿರುತ್ತಾರೆ.

4. ಮೇಲ್ಕಂಡ ಸಾಲಗಳ ಬಾಬು ಪ್ರತಿವಾದಿಯರು 8,04,304/- ರೂಗಳನ್ನು ವಾದಿಯ ಬ್ಯಾಂಕ್‌ಗೆ ಪಾವತಿಸಬೇಕಾಗಿರುತ್ತದೆ. ಮೇಲ್ಕಂಡ ದಾವೆಯಲ್ಲಿ ವಾದಿಯ ಬ್ಯಾಂಕ್ ಮತ್ತು ಪ್ರತಿವಾದಿಯರು ಸಂಧಾನಕಾರರ ಮತ್ತು ಹಿತೈಷಿಗಳ ಹಿತವಚನದ ಮೇರೆಗೆ

ಜನತಾ ನ್ಯಾಯಾಲಯದಲ್ಲಿ ಮೂರು ಲಕ್ಷದ ಅರವತ್ತೈದು ಸಾವಿರ (3,65,000/-) ರೂಗಳಿಗೆ ಒನ್ ಟೈಂ ಸೆಟ್ಲ್‌ಮೆಂಟ್ ಮಾಡಿಕೊಂಡಿದ್ದು, ಸದರಿ ಮೂರು ಲಕ್ಷದ ಅರವತ್ತೈದು ಸಾವಿರ (3,65,000/-) ರೂಗಳನ್ನು ಪ್ರತಿವಾದಿಯರು ವಾದಿಯ ಬ್ಯಾಂಕ್‌ಗೆ ಪಾವತಿಸಿರುತ್ತಾರೆ.

ಆದ್ದರಿಂದ ವಾದಿಯ ಬ್ಯಾಂಕ್ ಮತ್ತು ಪ್ರತಿವಾದಿಯರು ಘನನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮೇಲ್ಕಂಡ ದಾವೆಯಲ್ಲಿ ವಾದಿಯ ಬ್ಯಾಂಕ್ ಪಾವತಿಸಿರುವ ಘನನ್ಯಾಯಾಲಯದ ಶುಲ್ಕವನ್ನು ವಾಪಸ್ಸು ಪಡೆಯಲು ಆದೇಶಿಸಿ, ಈ ದಾವೆಯನ್ನು ಮುಕ್ತಾಯ ಮಾಡಬಹುದೆಂದು ನ್ಯಾಯ ಮತ್ತು ಧರ್ಮದ ದೃಷ್ಟಿಯಿಂದ ಪ್ರಾರ್ಥಿಸಿಕೊಳ್ಳುತ್ತಾರೆ.

And it is further ordered that, the compromise petition filed by the parties is part and parcel of the compromise decree.

And it is further ordered that, office is directed to return the Court Fee to the plaintiff.

Given under my hand and seal of this Court on the 7th day of April, 2026.

SENIOR CIVIL JUDGE & JMFC
H.D.KOTE.

## MEMORANDUM OF COST INCURRED IN THE SUIT

| | **Plaintiff/s** | **Defendant/s** |
|---|---|---|
| 1. Court fee on Plaint | 51370-00 | -- |
| 2. Service of Process | 25-00 | -- |
| 3. Advocate fee | -- | -- |
| **TOTAL** | **51395-00** | **--** |

SENIOR CIVIL JUDGE & JMFC
H.D.KOTE.

**:ಷೆಡ್ಯೂಲ್:**

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಶಿಂಡೇನಹಳ್ಳಿ ಗ್ರಾಮದ ಸರ್ವೆ ನಂ.36/4 ರಲ್ಲಿರುವ 0-05 ಗುಂಟೆ, ಮತ್ತು ಸರ್ವೆ ನಂ.36/3 ರಲ್ಲಿರುವ 0-09 ಗುಂಟೆ ಮತ್ತು ಸರ್ವೆ ನಂ.34/5 ರಲ್ಲಿರುವ 0-25 ಗುಂಟೆ ಮತ್ತು ಸರ್ವೆ ನಂ.34/3 ರಲ್ಲಿರುವ 0-28.08 ಗುಂಟೆ ಮತ್ತು ಸರ್ವೆ ನಂ.34/2 ರಲ್ಲಿರುವ 0-13.08 ಗುಂಟೆ ಜಮೀನುಗಳಿಗೆ ಒಂದೇ ಚಕ್ಕುಬಂಧಿ:-

ಪೂರ್ವಕ್ಕೆ : ಸರ್ಕಾರಿ ರಸ್ತೆ

ಪಶ್ಚಿಮಕ್ಕೆ : ಗಿರೀಶ್‌ರವರ ಜಮೀನು

ಉತ್ತರಕ್ಕೆ : ತಮ್ಮಣ್ಣೇಗೌಡರವರ ಜಮೀನು

ದಕ್ಷಿಣಕ್ಕೆ : ಪಾಪೇಗೌಡರವರ ಜಮೀನು

SENIOR CIVIL JUDGE & JMFC
H.D.KOTE.